# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 637 (819) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೈಗಾರಿಕೋದ್ಯಮಗಳಿಂದ ಯಾವ ಪ್ರದೇಶಗಳಲ್ಲಿ ಭೂಮಿಗೆ ಬೇಡಿಕೆ ಯಾವ ಪ್ರಮಾಣದಲ್ಲಿದೆ; ಇದನ್ನು ಹೊಂದಿಸಲು ಕೆ.ಐ.ಎ.ಡಿ.ಬಿ ಯ ಪ್ರಯತ್ನಗಳೇನು; (ವಿವರ ಒದಗಿಸುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು, ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ, ಮಂಡಳಿ ಸಭೆಯ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಐಎಡಿ ಕಾಯ್ದೆ 1966 ರನ್ವಯ ಮಂಡಳಿ ವತಿಯಿಂದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. |
| ಆ | ರಿಯಲ್ ಎಸ್ಟೇಟ್ ಮಾಫಿಯಾ ಮತ್ತು ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸುವ ಖರ್ಚು ವಿಪರೀತವಾಗಿರುವುದರಿಂದ ಉದ್ದಿಮೆದಾರರಿಗೆ ಹೆಚ್ಚುವರಿ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಲಾಭವಿಲ್ಲದೆ, ನಷ್ಟವೂ ಆಗದಂತೆ ಉತ್ತಮ ಗುಣಮಟ್ಟದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿಯ ದರಗಳು ಹಾಗೂ ಮಾರುಕಟ್ಟೆಯ ದರಗಳನ್ನು ಅವಲೋಕಿಸಿ ರೈತರಿಂದ ಜಮೀನನ್ನು ಪಡೆದು ಜಮೀನಿಗೆ ಹಣ ಸಂದಾಯ ಮಾಡಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತಗಲುವ ವೆಚ್ಚವನ್ನು ಒಟ್ಟುಗೂಡಿಸಿ, ಪ್ರತಿ ಎಕರೆಗೆ ತಗಲುವ ದರವನ್ನು ನಿಗದಿಪಡಿಸುವ ಷರತ್ತು ಮತ್ತು ನಿಬಂಧನೆಗಳನ್ನು ಅಳವಡಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ. |

| | | |
|---|---|---|
| ಇ | ಕೈಗಾರಿಕಾ ಪ್ರದೇಶಗಳನ್ನಾಗಿ ಅಭಿವೃಧ್ಧಿಪಡಿಸಲು ಉದ್ದೇಶಿತ ಭೂಮಿಯನ್ನು ಗುರುತಿಸಿದ ನಂತರ ರೈತರು ಹಾಗೂ ಉದ್ದಿಮೆದಾರರೇ ನೇರವಾಗಿ ಬೆಲೆ ನಿಶ್ಕರ್ಷ ಮಾಡಿಕೊಂಡು ಖರೀದಿ ಪ್ರಕ್ರಿಯೆ ಮುಗಿಸುವ ವ್ಯವಸ್ಥೆ ಸೃಜಿಸಲು ಸರ್ಕಾರ ಅಗತ್ಯವಿರುವ ಭೂಮಿಕೆಯನ್ನು ಸಿದ್ದಪಡಿಸಲು ಯಾವ ರೀತಿಯ ಕ್ರಮ ಕೈಗೊಳ್ಳುತ್ತಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತನ್ನ ಕೈಗಾರಿಕಾ ಪ್ರದೇಶಗಳಿಗೆ ಭೂಸ್ವಾಧೀನಪಡಿಸಿ ಹಂಚಿಕೆ ಕ್ರಮ ಕೈಗೊಳ್ಳುವ ಜೊತೆಯಲ್ಲಿ, ಉದ್ದಿಮೆದಾರರೇ ಆಯ್ಕೆ ಮಾಡಿಕೊಂಡಂತಹ ಜಮೀನುಗಳನ್ನು ತಾವೇ ಖರೀದಿ ಮಾಡಿ ಅಥವಾ ಸಂಬಂಧಪಟ್ಟ ಭೂಮಾಲೀಕರ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಏಕಗವಾಕ್ಷಿ ಸಭೆಯಲ್ಲಿ ಅನುಮೋದನೆ ಪಡೆದು ಮಂಡಳಿಯು ನಿಗದಿಪಡಿಸಿದ ಮೊತ್ತವನ್ನು ನಿಯಮಾನುಸಾರ ಸೇವಾ ಶುಲ್ಕವು ಸೇರಿದಂತೆ ಭರಿಸಿದ್ದಲ್ಲಿ ಏಕ ಘಟಕ ಸಂಕೀರ್ಣ ಯೋಜನೆಯಡಿಯಲ್ಲಿ ಭೂಸ್ವಾಧೀನಪಡಿಸಿ ಹಂಚಿಕೆ ಮಾಡುವ ಅವಕಾಶ ಮಂಡಳಿಯಲ್ಲಿ ಹಾಲಿ ಚಾಲ್ತಿಯಲ್ಲಿರುತ್ತದೆ. |
| ಈ | ಹೀಗೆ ಖರೀದಿಗೊಳಪಟ್ಟ ಭೂಮಿಯಲ್ಲಿ ಅಗತ್ಯವಿರುವ ರಸ್ತೆ, ನೀರು, ಒಳಚರಂಡಿ, ವಿದ್ಯುತ್ ದೀಪ ಅಳವಡಿಸಿಕೊಳ್ಳುವ ಬಗ್ಗೆ, ಉದ್ದಿಮೆದಾರರೊಂದಿಗೆ ಸಹಭಾಗಿತ್ವ ಹೊಂದಲು ಮಾತ್ರ ಸರ್ಕಾರ ತನ್ನ ಪಾತ್ರ ಸೀಮಿತಗೊಳಿಸಿಕೊಳ್ಳಲು ಸರ್ಕಾರ ಮುಂದಿರುವ ಅಡಚಣೆಗಳೇನು? (ವಿವರವಾಗಿ ಮಾಹಿತಿ ಒದಗಿಸುವುದು) | ಮುಂದುವರೆದು, ಏಕ ಘಟಕ ಸಂಕೀರ್ಣ ಯೋಜನೆಯಡಿಯಲ್ಲಿ ಸ್ವಾಧೀನಪಡಿಸಿದ ಜಮೀನುಗಳಿಗೆ ಯೋಜನಾ ಪ್ರವರ್ತಕರ ಯೋಜನಾ ಅನುಷ್ಠಾನದ ಅಗತ್ಯಕ್ಕೆ ಅನುಗುಣವಾಗಿ ಅಭಿವೃದ್ಧಿ ಚಟುವಟಿಕೆಯನ್ನು ಅವರೇ ಸಿದ್ದಪಡಿಸಿಕೊಳ್ಳಬೇಕಾಗಿದ್ದು, ಮಂಡಳಿಯು ತನ್ನ ಕೈಗಾರಿಕಾ ಪ್ರದೇಶದ ಯೋಜನೆಗಾಗಿ ಸ್ವಾಧೀನಪಡಿಸಿದ ಜಮೀನುಗಳಲ್ಲಿ ಮಾತ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಹಂಚಿಕೆ ಮಾಡುತ್ತದೆ. |

**ಸಂಖ್ಯೆ: ಸಿಐ 122 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.